# ಸಭಾಪತಿ ಬಸವರಾಜ್ ಹೊರಟ್ಟಿ ಅವರನ್ನು ಗೌರವಿಸಿದ ನೂತನ ವಿ.ಪ. ಸದಸ್ಯೆ ಉಮಾಶ್ರೀ

ಶತಮಾನಗಳ ಇತಿಹಾಸ ಇರುವ ವಿಧಾನಪರಿಷತ್ತಿನಲ್ಲಿ ನನ್ನದೇ ಆದ ಪುಟ್ಟ ಹೆಜ್ಜೆಗಳನ್ನ ಮೂಡಿಸುವ ಮೂಲಕ ನಾಡಿನ ಜನರ ಹೃದಯದಲ್ಲಿ ನೆಲೆ ಊರಲು ಪ್ರಯತ್ನಿಸುತ್ತೇನೆ ಎಂದು ಹೇಳಿದರು.

ಸಭಾಪತಿ ಬಸವರಾಜ್ ಹೊರಟ್ಟಿ ಅವರು ಗೌರವ ಸ್ವೀಕರಿಸಿ ಮಾತನಾಡಿದ ಅವರು ಇಲ್ಲಿ ಸೇವೆ ಮಾಡಲು ಸಾಕಷ್ಟು ಅವಕಾಶವಿದೆ ಜೊತೆಗೆ ಕಲಿಯಲು ಸಹ ಇದೊಂದು ದೊಡ್ಡಮಟ್ಟದ ಜ್ಞಾನ ದೇಗುಲ ವಿದ್ದಂತೆ. ಹಲವಾರು ಹಿರಿಯರು ಇಲ್ಲಿ ತಮ್ಮದೇ ಆದ ಅನುಭವದ ಹೆಗ್ಗುರುತುಗಳನ್ನು ಮೂಡಿಸಿ ಹೋಗಿದ್ದಾರೆ. ಸೇವೆ ಮಾಡಲು ಸಿಕ್ಕ ಅವಕಾಶವನ್ನ ಸದುಪಯೋಗ ಮಾಡಿಕೊಂಡು ನಾಡಿನ ಜನರ ಪ್ರೀತಿಗೆ ಉಮಾಶ್ರೀ ಅವರು ಖಂಡಿತವಾಗಿಯೂ ಯಶಸ್ವಿಯಾಗುತ್ತಾರೆ. ಎಂಬ ನಂಬಿಕೆ ನನಗಿದೆ. ಈಗಾಗಲೇ ಒಂದು ಬಾರಿ ಶಾಸಕರಾಗಿ ಸಚಿವರಾಗಿ ಸೇವೆ ಮಾಡಿದ ಅನುಭವ ಸಹ ಅವರ ಜೊತೆ ಇದೆ. ಅಲ್ಲದೆ ನಾಡಿನ ಪ್ರಖ್ಯಾತ ಕಲಾವಿದರು ಸಹ ಆಗಿರುವುದರಿಂದ ಎಲ್ಲ ಸಮುದಾಯದ ನೋವು ನಲಿವುಗಳು ದುಃಖ ದುಮ್ಮಾನಗಳು ಅವರಿಗೆ ಗೊತ್ತು. ಸಿಕ್ಕ ಅವಕಾಶವನ್ನು ಸದುಪಯೋಗ ಮಾಡಿಕೊಂಡು ಸಮಾಜಕ್ಕೆ ತಮ್ಮದೇ ಆದ ಸೇವೆ ಸಲ್ಲಿಸುವ ಮೂಲಕ ಜನರ ಹೃದಯದಲ್ಲಿ ಶಾಶ್ವತವಾಗಿ ಇರುವಂತಾಗಲಿ ಎಂದು ಹಾರೈಸಿದರು.

ಈ ಸಂದರ್ಭದಲ್ಲಿ ಉಮಾಶ್ರೀ ಅವರ ಕುಟುಂಬ ವರ್ಗ ಹಿತೈಷಿಗಳು ಹಾಗೂ ಪರಿಷತ್ತಿನ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

# ಸಭಾಪತಿ ಬಸವರಾಜ್ ಹೊರಟ್ಟಿ ಅವರನ್ನು ಗೌರವಿಸಿದ ನೂತನ ವಿ.ಪ. ಸದಸ್ಯೆ ಉಮಾಶ್ರೀ



**ಬೆಂಗಳೂರು:** ನೂತನ ವಿಧಾನ ಪರಿಷತ್ ಸದಸ್ಯರಾಗಿ ನೇಮಕಗೊಂಡ ಖ್ಯಾತ ಕಲಾವಿದೆ ಮಾಜಿ ಸಚಿವರಾದ ಉಮಾಶ್ರೀ ಅವರು ಸಭಾಪತಿ ಬಸವರಾಜ್ ಹೊರಟ್ಟಿ ಅವರನ್ನು ಭೇಟಿಯಾಗಿ ಗೌರವಿಸಿದರು.

ನಂತರ ಮಾತನಾಡಿದ ಉಮಾಶ್ರೀ ಅವರು ನಾಲ್ಕು ದಶಕಗಳ ಅನುಭವ ಇರುವ ಸಭಾಪತಿ ಬಸವರಾಜ್ ಹೊರಟ್ಟಿ ಅಂಥವರ ಜೊತೆ ಅವರ ನೇತೃತ್ವದಲ್ಲಿ ಕೆಲಸ ಮಾಡಲು ಅವಕಾಶ ಸಿಕ್ಕಿದ್ದು ನನ್ನ ಸೌಭಾಗ್ಯ. ಅವರ ಮಾರ್ಗದರ್ಶನದಲ್ಲಿ ಅವರ ಸುದೀರ್ಘ ಅನುಭವಗಳನ್ನು ನನ್ನ ಸೇವಾ ಕಾರ್ಯದಲ್ಲಿ ತೊಡಗಿಸಿಕೊಂಡು ಸಮಾಜಮುಖಿ ಸಾರ್ಥಕ ಸೇವೆ ಮಾಡಲು ಪ್ರಯತ್ನಿಸುವುದಾಗಿ ಹೇಳಿದರು. ಹಿರಿಯರ ಮನೆಯಲ್ಲಿ ಅನುಭವಿಕರ ಜೊತೆ ಕೆಲಸ ಮಾಡಲು ಅವಕಾಶ ಸಿಕ್ಕಿದ್ದು ನನ್ನ ಪೂರ್ವ ಜನ್ಮದ ಪುಣ್ಯ ಎಂದೇ ಭಾವಿಸಿದ್ದೇನೆ.

→P2